# ಬಳೆಯ ನಾದದೊಳು ಉಲಿವ ಸಂಸ್ಕೃತಿ



■ ರೂಪಾ ಕೆ.ಎಂ.

ಬಳೆಗಳ ಘಲ್ ಘಲ್ ನಾದವು ಸಂತಸಕ್ಕೆ ಹೊಸ ಭಾಷ್ಯ ಬರೆಯಬಲ್ಲದು. ಏಕಾಂತದಲ್ಲಿ ಕೂತು ಅದರ ಕಿಣಿ ಕಿಣಿ ಶಬ್ದವನ್ನು ಆಲಿಸಿದರೆ, ಅದು ಒಳಗಿನ ಖಾಲಿತನವನ್ನು ನೀಗಬಲ್ಲದು. ಅಷ್ಟರಮಟ್ಟಿಗೆ ಬಳೆಯು ನಾದದೊಳು ಮೈಮರೆಯಲು ಅನುವು ಮಾಡಿಕೊಡುತ್ತದೆ.

ಸಾಂಪ್ರದಾಯಿಕ ಉಡುಗೆ–ತೊಡುಗೆಯಲ್ಲಿ ಬಳೆಗಳಿಗೆ ಮಹತ್ವ ಹೆಚ್ಚಿದೆ. ಅದರಲ್ಲಿಯೂ ಮದುವಣಗಿತ್ತಿ ತೊಡುವ ಬಳೆಗಳ ವಿನ್ಯಾಸ, ಬಣ್ಣ, ಮೆರುಗು ಹೀಗೆ ಎಲ್ಲವೂ ಪ್ರದೇಶದಿಂದ ಪ್ರದೇಶಕ್ಕೆ, ಧರ್ಮದಿಂದ ಧರ್ಮಕ್ಕೆ ಬದಲಾಗುತ್ತವೆ. ಅನಾದಿಕಾಲದಿಂದಲೂ ಬಳೆಗಳು ಸಮೃದ್ಧಿ ಹಾಗೂ ಖುಷಿಯ ಸಂಕೇತವಾಗಿಯೇ ಗುರುತಿಸಿಕೊಂಡಿವೆ.

ಕೆಂಪು ಅಥವಾ ಹಸಿರು ಬಣ್ಣದ ಬಳೆಗಳನ್ನು ಸಾಮಾನ್ಯವಾಗಿ ಮದುವೆ ಸಮಾರಂಭಗಳಲ್ಲಿ ತೊಡಲಾಗುತ್ತದೆ. ಅದರಲ್ಲಿಯೂ ಸಣ್ಣ ಸಣ್ಣ ಬಂಗಾರ ಬಣ್ಣದ ಗಚ್ಚು ಇರುವ ಕೆಂಪು ಮತ್ತು ಹಸಿರು ಬಣ್ಣದ ಬಳೆಗಳ ಜತೆಗೆ ಚಿನ್ನದ ಬಳೆಗಳನ್ನು ತೊಡುವುದು ಮದುವಣಗಿತ್ತಿಯ ಸಂಪ್ರದಾಯ. ಇನ್ನೂ ಕೆಲವು ಕಡೆಗಳಲ್ಲಿ ಗೌರಿ ಹಬ್ಬದಂದು ಗೌರಿ ಬಳೆಯಾಗಿ ಕಪ್ಪುಬಣ್ಣದ ಬಳೆಗಳನ್ನು ದೇವರಮೂರ್ತಿಗೆ ತೊಡಿಸಿ, ನಂತರ ಹೆಣ್ಣುಮಕ್ಕಳೂ ತೊಡುವ ಸಂಪ್ರದಾಯವೂ ಇದೆ.

## ಚೂಡಾ

ಕೆಂಪು, ಬಿಳಿಯ ಬಳೆಗಳಿವು. ಕೆಂಬಣ್ಣದ ಯಾವುದೇ ವಿನ್ಯಾಸವಿಲ್ಲದ ಸಾದಾ ಬಳೆಗಳಿಗೆ ರಂಗು ರಂಗಿನ ಚಿತ್ತಾರಗಳಿರುವ ಬಿಳಿ ಬಣ್ಣದ ಆರು ಬಳೆಗಳನ್ನು ತೊಡಿಸಲಾಗುತ್ತದೆ. ಈ ಬಳೆಗಳನ್ನು ವಧುವಿನ ಸೋದರಮಾವ ಅಥವಾ ಚಿಕ್ಕಮ್ಮ ಮದುವೆ ವೇಳೆ ನೀಡುತ್ತಾರೆ. ಮೊದಲೆಲ್ಲ ಚೂಡಾ ಬಳೆಗಳನ್ನು ದಂತದಿಂದ ತಯಾರಿಸಲಾಗುತ್ತಿತ್ತು. ಆದರೆ, ಈಗ ಪ್ಲಾಸ್ಟಿಕ್‌ನಿಂದ ತಯಾರಿಸಲಾಗುತ್ತದೆ. ಕೆಲವೊಮ್ಮೆ ಈ ಬಿಳಿಯ ಬಳೆಗಳಿಗೆ ವಜ್ರ ಹಾಗೂ ಮುತ್ತಿನ ಮಣಿಗಳನ್ನು ಜೋಡಿಸಲಾಗಿರುತ್ತದೆ.

ಗುಮ್ಮಟಾಕಾರ ಬೆಳ್ಳಿ, ಚಿನ್ನದಲ್ಲಿರುವ ಸಣ್ಣ ಗಂಟೆಗಳನ್ನು ಈ ಚೂಡಾಗಳಿಗೆ ಕಟ್ಟಲಾಗುತ್ತದೆ. ತವರು ಮನೆ ಹಾಗೂ ಸ್ನೇಹಿತರ ನೆನಪಿಗೆಂದು ಇದನ್ನು ಕಟ್ಟಲಾಗುತ್ತದೆ.

## ಶಾಖಾ ಪೋಲಾ

ಶಾಖಾ ಪೋಲಾ ಎಂಬುದು ಬಂಗಾಳಿ ವಧುಗಳು ಮದುವೆಯ ಸಂದರ್ಭದಲ್ಲಿ ಧರಿಸುವ ಬಳೆಯಾಗಿದೆ. ‘ಶಾಖಾ’ ಎಂದು ಕರೆಯಲಾಗುವ ಬಿಳಿ ಶಂಖದ ಬಳೆಗಳು ಮತ್ತು ‘ಪೋಲಾ’ ಎಂದು ಕರೆಯುವ ಕೆಂಪು ಹವಳದ ಬಳೆಗಳನ್ನು ಧರಿಸುತ್ತಾರೆ. ವಧುವಿನ ಬದುಕಿನಲ್ಲಿ ಉಂಟಾಗುವ ಪರಿವರ್ತನೆಯನ್ನು ಇದು ಸೂಚಿಸುತ್ತದೆ.

## ಹಿರ್ವಾ ಚೂಡ

ಬದುಕಿನ ಹೊಸ ಘಟ್ಟ ಮತ್ತು ಫಲವತ್ತತೆಯನ್ನು ಸೂಚಿಸುವ ಬೆಸ ಸಂಖ್ಯೆಯಲ್ಲಿರುವ ಹಸಿರು ಗಾಜಿನ ಬಳೆಗಳನ್ನು ಹಿರ್ವಾ ಚೂಡ ಎಂದು ಕರೆಯಲಾಗುತ್ತದೆ. ಯಾವುದೇ ವಿನ್ಯಾಸಗಳಿಲ್ಲದ ಸಾದಾ ಗಾಢ ಹಸಿರಿನ ಬಳೆಗಳ ಮಧ್ಯೆ ಮತ್ತು ಆಚೆ ಈಚೆ ನಯವಾದ ಚಿನ್ನದ ಪಾಟಲ್ಯ ಬಳೆಗಳನ್ನು ತೊಡುತ್ತಾರೆ. ಜತಗೆ ಸಂಕೀರ್ಣ ವಿನ್ಯಾಸದ ಭಾರವಾದ ಕಡಗಳನ್ನು ತೊಡಲಾಗುತ್ತದೆ.

## ಕಟುರಿ

ಒಡಿಯಾದಲ್ಲಿ ಹಿತ್ತಾಳೆಯಲ್ಲಿ ತಯಾರಿಸುವ ಕಟುರಿ ಬಳೆಗಳಿಗೆ ಮಹತ್ವದ ಸ್ಥಾನವಿದೆ. ಇದು ತೆಳ್ಳಗಿರುತ್ತದೆ. ಒಡಿಯಾ ಮಹಿಳೆಯರು ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಎರಡೂ ಮಣಿಕಟ್ಟುಗಳ ಮೇಲೆ ಕಟುರಿ ಬಳೆಗಳನ್ನು ತೊಟ್ಟು ಸಂಭ್ರಮಿಸುತ್ತಾರೆ. ಸಾಮಾನ್ಯವಾಗಿ ಬೆಸಸಂಖ್ಯೆಯಲ್ಲಿ ತೊಡುವುದು (ಮೂರು ಅಥವಾ ಐದು) ಶುಭವೆಂದು ಪರಿಗಣಿಸಲಾಗುತ್ತದೆ.

## ಖಾರು

ಅಸ್ಸಾಂನಲ್ಲಿ ಗಮ್ಖಾರು ಅಥವಾ ಮುತ್ತಿ ಖಾರು ಎಂದು ಕರೆಯುತ್ತಾರೆ. ಈ ಬಳೆಗಳನ್ನು ಅಸ್ಸಾಂನ ವಧುಗಳು ಮಾತ್ರ ತೊಡುತ್ತಾರೆ. ಅದರಲ್ಲಿಯೂ ಅಸ್ಸಾಂನ ಅಹೋಮ್ ರಾಜವಂಶದ ಮಹಿಳೆಯರಿಗೆ ಈ ಬಳೆಗಳು ಮಹತ್ವದೆನಿಸಿವೆ. ಯಂತ್ರಗಳನ್ನು ಬಳಸದೇ ಕುಶಲವಾಗಿ ಬೆಳ್ಳಿಯ ತಳಹದಿಯ ಮೇಲೆ ಚಿನ್ನದ ಲೇಪನ ಮಾಡಿ ಇದನ್ನು ತಯಾರಿಸಲಾಗುತ್ತದೆ.

## ಹೈದರಾಬಾದ್ ಚುಡ

ಹೈದರಾಬಾದ್ ಭಾಗದಲ್ಲಿ ವಧುವಿನ ಬಳೆಗಳನ್ನು ರೇಸಿನ್‌ನಿಂದ ತಯಾರಿಸಲಾಗುತ್ತದೆ. ಸಂಕೀರ್ಣ ವಿನ್ಯಾಸಗಳಿರುವ, ಗಾಢ ಬಣ್ಣದ ಈ ಬಳೆಗಳಲ್ಲಿ ಕನ್ನಡಿಗಳು, ಮಣಿಗಳು, ಹರಳಿನಿಂದ ಮಾಡಿದ ಕೆತ್ತನೆಗಳನ್ನು ನೋಡಬಹುದು. ಕುಂದನ್ ಮತ್ತು ರತ್ನದ ಕುಸುರಿಗಳಿರುವ ಬಳೆಗಳೇ. ■

